

# ಮರಳು ದಿಣ್ಣೆ

■ ಅನು ಬೆಳ್ಳೆ

## ಕನಸು ಕಂಗಳಲ್ಲಿ ಅಪೂರ್ವ ರಾಗದ ಬಿಂಬ

ಪಶ್ಚಿಮ ಕರಾವಳಿಯ ಮರಳು ದಿಣ್ಣೆಯ ಮೇಲೆ ನಡೆದಾಟವನ್ನು ಸಲೀಸು ಮಾಡಿಕೊಂಡಿದ್ದ ಹಿತೇಶನಿಗೆ ಭೋರ್ಗರೆವ ಕಡಲನ್ನು ನೋಡುವುದಕ್ಕಿಂತಲೂ ಶಾಂತವಾಗಿ ದಂಡೆ ಸೇರುವ ಸಮುದ್ರದ ನೀರನ್ನು ನೋಡುವುದೇ ಸಂತೋಷ. ಆ ಖುಷಿಗೆ ತಂಪು ನೀರೆರೆದದ್ದು ಕನಸುಗಳಲ್ಲಿ ತುಂಬಿಕೊಂಡ ಅಪೂರ್ವ ರಾಗದ ಬಿಂಬ. ಬಿಂಬದ ಹುಡುಕಾಟದಲ್ಲಿ ಸೋತು ಹೋಗುವ ಸಣ್ಣಗಿನ ಆತಂಕದಿಂದ ಮತ್ತೆ ಮತ್ತೆ ಮರಳು ದಿಣ್ಣೆಯತ್ತ ಸೆಳೆತ.

ತಿಳಿ ಗೋಧಿ ಹಿಟ್ಟಿನ ಬಣ್ಣದ ಮರಳ ರಾಶಿಯ ಮೇಲೆ ಮೆತ್ತಗೆ ಹೆಜ್ಜೆಯಿಕ್ಕುತ್ತಾ ನಡೆಯುತ್ತಿದ್ದ ಕನಸು ಕಂಗಳ ಯುವಕ ತಟ್ಟನೆ ನಿಂತು ಹಿಂದಕ್ಕೆ ಹೊರಳಿದ.

ಬಿಳಿ ನೊರೆಯೊಂದಿಗೆ ತಿರುವಿ ಹೆಬ್ಬಾವಿನಂತೆ ಉದ್ದಕ್ಕೂ ಹರಡಿದ ಉಪ್ಪು ನೀರಿನ ಅಲೆ ನೀಲ ಜಲರಾಶಿಗೆ ಕಟ್ಟಿದ ಗೋಡೆ! ಮನದ ಲಹರಿಗೂ ಇದೇ ತರಹದ ಗೋಡೆ ಅವಶ್ಯ. ಮನಸ್ಸು ಏರಿಳಿತ ಪಡೆಯಿತು.

ಹಿತೇಶ ನಿಧಾನವಾಗಿ ಮತ್ತೆ ಹೆಜ್ಜೆಯನ್ನು ಮುಂದಿರಿಸಿದ. ಸಮುದ್ರಕ್ಕೆ ಇಳಿಯಲಾರದ ಒಡಕು ದೋಣಿಯ ಬಳಿ ನಿಂತು ಸುತ್ತಲೂ ವೀಕ್ಷಿಸಿದ. ಕನಸು ಕಂಗಳ ಯುವಕನಿಗೆ ಮತ್ತಷ್ಟು ಕನಸುಗಳನ್ನು ಹೆಣೆಯುವ ತವಕ. ಅದಕ್ಕೆ ಪ್ರಸಕ್ತ ಸ್ಥಳ ಇದು. ಏರು ಸೂರ್ಯನ ಬಿಸಿಲಿಗೆ ನೆರಳು ಕೊರೆದಂತಿದ್ದ ದೋಣಿಯ ಬದಿಗೆ ಸರಿದು ಕಾಲು ಚಾಚಿ ಕುಳಿತ.

ಅಗಾಧ ಜಲರಾಶಿ ಕೌತುಕದ ಲೋಕ! ತನ್ನೊಳಗೆ ಜಲಚರಗಳನ್ನು, ನಿಧಿಗಳನ್ನು, ನಿಗೂಢಗಳನ್ನು ಮುಚ್ಚಿಕೊಂಡ ಸಂಪನ್ನೆ. ಇದೇ... ಇದೇ ತನ್ನ ಮನದ ಲಹರಿಗೂ ಪುಳಕ ಹುಟ್ಟಿಸಿದ ತಾಣ!

ನಿರ್ದಯಿ, ನಿಷ್ಕಾರುಣಿ, ಸ್ವಾರ್ಥಿಗಳ ಬಲೆಗೆ ಬಿದ್ದ ಚೆಲುವಿನ ಮೀನು ಅವಳು! ತಕ್ಷಣ ಕಣ್ಣುಗಳು ಮಂಜಾದವು. ಅರೆ ಕ್ಷಣ ಮುಚ್ಚಿಕೊಂಡ ಕಣ್ಣುಗಳಲ್ಲಿ ಸ್ಪಷ್ಟ ರೂಪ ತೆರೆದುಕೊಂಡಿತು.

'ಹಿತೂ, ಸ್ವರ್ಗ ಬೇರೆಲ್ಲೂ ಇಲ್ಲ. ಇಲ್ಲೇ ಇದೆ. ನಾವು ಶಾಶ್ವತವಾಗಿ ಇಲ್ಲೇ ಇದ್ದು ಬಿಡೋಣ ಅನಿಸ್ತಿದೆ' ಲಹರಿ ಮೆಲ್ಲಗೆ ಮನದ ವೀಣೆಯನ್ನು ಮೀಟಿತು. ಕಣ್ಣು ತೆರೆದ ಯುವಕ. ಸಾಗರದ ನೀರಿನಂತೆ ತುಂಬಿಕೊಂಡಿತು ಕಣ್ಣು. ಸಮುದ್ರ ಮಾಯವಾದಂತೆ ಕಂಡಿತು. ನೀರು ತುಂಬಿದ ಕಣ್ಣುಗಳನ್ನು ಎರಡೂ ಕೈಗಳಿಂದ ಒರೆಸಿಕೊಂಡ.

ನೆನಪುಗಳು ಮುಗ್ಗರಿಸಿ ಬದುಕಿಗೆ ಕೊಟ್ಟ ಬಿಡುವಿಲ್ಲದ ಕೆಲಸ, ಅಲೆದಾಟ. ಅದೂ ಮರಳು ದಿಣ್ಣೆಯ ಮೇಲೆ. ಭಾರವಾದ ಹೆಜ್ಜೆಗಳ ಜೊತೆಗೆ ವೇಗದ ನಡಿಗೆ ಒಗ್ಗೂಡಿಸಿಕೊಂಡಷ್ಟು.

'ನಿಧಿ ನಿಕ್ಷೇಪದ ಅನ್ವೇಷಣೆಯಲ್ಲಿ ತೊಡಗಿಕೊಂಡಿದ್ದೀ ಅನ್ಸುತ್ತೆ' ಬೆನ್ನ ಹಿಂದಿನಿಂದ ಬಂದ ಕಂಚಿನ ಕಂಠದ ಮಾತುಗಳಿಗೆ ತಲೆ ಕೊಡವಿಕೊಂಡ.

ಹಿಂದೆ ನಿಂತವನ ನೆರಳು ಒಡಕು ದೋಣಿಯ ನೆರಳನ್ನು ಮೀರಿ ಎದುರು